## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ದಿನಾಂಕ: 16.07.2024 ರಂದು ಸಂಭವಿಸಿದ ಭೂ ಕುಸಿತದಿಂದ ಕಾಣೆಯಾಗಿರುವ 02 ಜನರ ವಾರಸುದಾರರಿಗೆ ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಪರಿಹಾರವನ್ನು ಪಾವತಿಸುವ ಬಗ್ಗೆ.

**ಓದಲಾದ**
1. ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ: ಸಿಎಎಲ್/ವಿವ-02/2024-25, ದಿನಾಂಕ: 13.08.2024.
2. ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ (ಪರಿಹಾರ ನಿಧಿ) ರವರ ಪತ್ರ ಸಂಖ್ಯೆ: ಸಿಎಂ/66/ಸಿಎಂಆರ್‌ಎಫ್/ಜಿಇಎನ್ 2024, ದಿನಾಂಕ: 20.09.2024.
3. ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ: ಸಿಎಎಲ್/ಸಿಆರ್-07/2024-25, ದಿನಾಂಕ: 18.10.2024 ಮತ್ತು 21.10.2024.

*****

**ಪ್ರಸ್ತಾವನೆ:**

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ದಿನಾಂಕ: 16.07.2024 ರಂದು ಸಂಭವಿಸಿದ ಭೂ ಕುಸಿತದಿಂದ ಗಂಗಾವಳಿ ನದಿಯಲ್ಲಿ 11 ಜನರು ಕಾಣೆಯಾಗಿದ್ದು, ಜಿಲ್ಲಾಡಳಿತ, ಪೋಲಿಸ್ ಇಲಾಖೆ, ನೌಕಾ ನೆಲೆ, NDRF / SDRF, ಅಗ್ನಿಶಾಮಕ ದಳ, NHAI, ಮತ್ತು ಐ.ಆರ್.ಬಿ ಕಂಪನಿಯವರು ಹಾಗೂ ಸ್ಥಳೀಯ ಮೀನುಗಾರರು ಸೇರಿ, ಸತತ ಕಾರ್ಯಾಚರಣೆಯ ನಡೆಸಿ 08 ಜನರ ಮೃತ ದೇಹವನ್ನು ಪತ್ತೆ ಮಾಡಲಾಗಿದ್ದು, ಇನ್ನುಳಿದಂತೆ ಕಾಣೆಯಾಗಿರುವ ಜಗನ್ನಾಥ ಜಟ್ಟಿ ನಾಯ್ಕ, ಲೋಕೇಶ್ ವಿಷ್ಣು ನಾಯ್ಕ ಮತ್ತು ಅರ್ಜುನ ಪ್ರೇಮನ್ ಎಂಬ 03 ಜನರನ್ನು ಪತ್ತೆ ಹಚ್ಚಲು ಜಿಲ್ಲಾಡಳಿತದಿಂದ ಎಲ್ಲಾ ಪ್ರಯತ್ನಗಳನ್ನು ಮಾಡಿದರು ಸಹ, ಇಲ್ಲಿಯವರೆಗೆ ಕಾಣೆಯಾದವರು ಪತ್ತೆಯಾಗಿರುವುದಿಲ್ಲ ಹಾಗೂ ಅನಾಮದೇಯ ಮೃತದೇಹ ಸಿಕ್ಕ ಬಗ್ಗೆ ಸಹ ಪೋಲಿಸ್ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲವೆಂದು ಹಾಗೂ ಸದರಿ 03 ಜನರು ಕಾಣೆಯಾಗಿರುವ ಬಗ್ಗೆ

.....2

ಪ್ರಥಮ ವರ್ತಮಾನ ವರದಿಯೊಂದಿಗೆ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಪೋಲಿಸ್ ಇಲಾಖೆ ಮತ್ತು ಸಹಾಯಕ ಆಯುಕ್ತರು, ಕುಮಟಾ ಹಾಗೂ ತಹಶೀಲ್ದಾರ, ಕುಮಟಾ ರವರು ಪ್ರಕರಣದಲ್ಲಿ ಕಾಣೆಯಾದವರ ಬಗ್ಗೆ ಸ್ಥಾನಿಕವಾಗಿ ಪಂಚನಾಮೆ ಮಾಡಿ ವರದಿಯನ್ನು ನೀಡಿರುತ್ತಾರೆ. ಹಾಗೂ ಪ್ರಕೃತಿ ವಿಕೋಪದಡಿಯಲ್ಲಿ ಮೃತರಾದ ವಾರಸುದಾರರಿಗೆ NDRF/SDRF ಮಾರ್ಗಸೂಚಿಯನ್ವಯ ಸಕ್ಷಮ ಪ್ರಾಧಿಕಾರದ ದೃಢೀಕರಣದೊಂದಿಗೆ 05 ಲಕ್ಷ ಪರಿಹಾರ ಧನ ಪಾವತಿಸಲು ಅವಕಾಶವಿದ್ದು, ಆದರೆ ಈ ಪ್ರಕರಣದಲ್ಲಿ ಕಾಣೆಯಾದವರನ್ನು ಪತ್ತೆ ಹಚ್ಚಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಇತರೆ ಇಲಾಖೆಗಳ ಸಹಯೋಗದೊಂದಿಗೆ ಕೈಗೊಂಡಿದ್ದರು ಸಹ ಸದರಿಯವರು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಕಾಣೆಯಾಗಿರುವ 03 ಜನರ ವಾರಸುದಾರರಿಗೆ NDRF/SDRF ಮಾರ್ಗಸೂಚಿಯನ್ವಯ ಪರಿಹಾರ ಧನವನ್ನು ಪಾವತಿಸುವ ಬಗ್ಗೆ ಸ್ಪಷ್ಟೀಕರಣವನ್ನು ನೀಡುವಂತೆ ಮೇಲೆ ಓದಲಾದ (1) ರ ಪತ್ರದಲ್ಲಿ ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರು ಕೋರಿರುತ್ತಾರೆ.

ನೈಸರ್ಗಿಕ ವಿಕೋಪದಿಂದ ಮೃತಪಟ್ಟವರಿಗೆ ಮಾತ್ರ ಪರಿಹಾರವನ್ನು ಪಾವತಿಸಲು ಭಾರತ ಸರ್ಕಾರದ ಗೃಹಮಂತ್ರಾಲಯವು ದಿನಾಂಕ: 11.07.2023ರಂದು ಹೊರಡಿಸಿರುವ NDRF/SDRF ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿರುವುದರಿಂದ, ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ದಿನಾಂಕ: **16.07.2024** ರಂದು ಸಂಭವಿಸಿದ ಭೂ ಕುಸಿತದಿಂದ ಕಾಣೆಯಾದ 03 ಜನರ ಮೃತ ದೇಹವು ಪತ್ತೆಯಾಗದ ಪ್ರಕರಣಕ್ಕೆ ಸಂಬಂದಿಸಿದ ವಾರಸುದಾರರಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.15.00 ಲಕ್ಷಗಳ ಪರಿಹಾರವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ ಖಾತೆ ಸಂಖ್ಯೆ: 37887098605 ರ ಧನಾದೇಶ ಸಂಖ್ಯೆ:105490, ದಿನಾಂಕ: 20.09.2024 ರಲ್ಲಿ ವಿಪತ್ತು ಪರಿಹಾರ ನಿಧಿ ಖಾತೆ ಸಂಖ್ಯೆ: 54001150679 ಕ್ಕೆ ಬಿಡುಗಡೆ ಮಾಡಿರುತ್ತಾರೆ. ಸದರಿ ಮೊತ್ತವನ್ನು ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರಿಗೆ ಬಿಡುಗಡೆ ಮಾಡಿ, ಅರ್ಹ ಫಲಾನುಭವಿಗಳಿಗೆ ಪರಿಹಾರ ತಲುಪಿರುವ ಬಗ್ಗೆ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಯ ವತಿಯಿಂದಲೇ ಲೆಕ್ಕಪತ್ರ ಪರಿಶೀಲನೆಗೆ ಅವಶ್ಯವಿರುವ ದಾಖಲೆಗಳನ್ನು ನಿರ್ವಹಿಸುವಂತೆ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ (ಪರಿಹಾರ ನಿಧಿ) ರವರು ತಿಳಿಸಿರುತ್ತಾರೆ.

.....3

ಪ್ರಸ್ತಾಪಿತ ಪ್ರಕರಣದಲ್ಲಿ ಕಾಣೆಯಾಗಿದ್ದ ಮೂರು ಜನರ ಪೈಕಿ ಅರ್ಜುನ ಎಂಬುವವರ ಮೃತ ದೇಹವು ದಿನಾಂಕ: 25.09.2024 ರಂದು ಪತ್ತೆಯಾಗಿರುವುದಾಗಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರು ವರದಿಸಿರುತ್ತಾರೆ, ಅದರಂತೆ ದಿ|| ಅರ್ಜುನ ರವರ ವಾರಸುದಾರರಿಗೆ NDRF / SDRF ಮಾರ್ಗಸೂಚಿಯನ್ವಯ ರೂ.5.00 ಲಕ್ಷಗಳ ಪರಿಹಾರವನ್ನು ದಿನಾಂಕ: 10.10.2024 ರಂದು ಪಾವತಿಸಲಾಗಿರುತ್ತದೆ ಹಾಗೂ ಇಲ್ಲಿಯವರೆವಿಗೂ ಕಾಣೆಯಾಗಿರುವವರ ಪೈಕಿ ಇಬ್ಬರು ಪತ್ತೆಯಾಗಿರುವುದಿಲ್ಲ ಹಾಗೂ ಪೋಲಿಸ್ ಇಲಾಖೆಯ ವರದಿಯ ಪ್ರಕಾರ ಘಟನೆ ನಡೆದ ಸ್ಥಳ ಹಾಗೂ ಸಮಯದಲ್ಲಿ ಪತ್ತೆಯಾಗದ ಈ ಕೆಳಕಂಡ ಇಬ್ಬರು ಸಹ ಇರುವುದಾಗಿ ಉಲ್ಲೇಖಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಕಾಣೆಯಾಗಿರುವವರ ವಾರಸುದಾರರಿಗೆ ಪರಿಹಾರವನ್ನು ಪಾವತಿಸಲು ರೂ.10.00 ಲಕ್ಷಗಳ ಮೊತ್ತವನ್ನು ಜಿಲ್ಲಾಧಿಕಾರಿಗಳ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯ ನಿರ್ವಹಣೆಗೆ ತೆರೆಯಲಾಗಿರುವ ಬ್ಯಾಂಕ್ ಖಾತೆಗೆ **ಬ್ಯಾಂಕ್ ಹೆಸರು: State Bank of India, ಶಾಖೆಯ ಹೆಸರು: Karwar, ಬ್ಯಾಂಕ್ ಖಾತೆ ಸಂಖ್ಯೆ: 10638097221, ಐಎಫ್‌ಎಸ್‌ಸಿ ಸಂಖ್ಯೆ: SBIN0000857** ಗೆ ಬಿಡುಗಡೆ ಮಾಡುವಂತೆ ಮೇಲೆ ಓದಲಾದ (3) ರ ಪತ್ರಗಳಲ್ಲಿ ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರು ಕೋರಿರುತ್ತಾರೆ.

| ಕ್ರ. ಸಂ. | ಕಾಣೆಯಾಗಿರುವವರ ವಿವರಗಳು |
|---|---|
| 1 | Jagannath s/o Jatti Naik, Age-54, Shirur Village, Ankola Taluk, Uttara Kannada District. |
| 2 | Lokesh s/o Vishnu Naik, Age-30, Gangekolla Village, Kumta Taluk, Uttara Kannada District. |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ದಿನಾಂಕ: 16.07.2024 ರಂದು

.....4

ಸಂಭವಿಸಿದ ಭೂ ಕುಸಿತದಿಂದ ಗಂಗಾವಳಿ ನದಿಯಲ್ಲಿ ಕಾಣೆಯಾದ ಇಬ್ಬರು ವ್ಯಕ್ತಿಗಳ ಕಾನೂನುಬದ್ದ ವಾರಸುದಾರರಿಗೆ ತಲಾ ರೂ. 5 ಲಕ್ಷಗಳ ಪರಿಹಾರ ಮೊತ್ತವಾಗಿ ಪಾವತಿಸಲು ಒಟ್ಟು ರೂ. 10 ಲಕ್ಷಗಳನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿರವರಿಗೆ ಬಿಡುಗಡೆ ಮಾಡಲು ಹಾಗೂ ಉಳಿದ ರೂ. 5 ಲಕ್ಷಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಹಿಂದಿರುಗಿಸಲು ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಂಇ 457 ಟಿಎನ್‌ಆರ್ 2024;</u>**

**<u>ಬೆಂಗಳೂರು, ದಿನಾಂಕ: 28.10.2024.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ದಿನಾಂಕ: 16.07.2024 ರಂದು ಸಂಭವಿಸಿದ ಭೂ ಕುಸಿತದಿಂದ ಪತ್ತೆಯಾಗದ ಕೆಳಕಂಡ ಇಬ್ಬರು ವ್ಯಕ್ತಿಗಳ ಕಾನೂನುಬದ್ದ ವಾರಸುದಾರರಿಗೆ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.10.00 ಲಕ್ಷಗಳ ಪರಿಹಾರವನ್ನು ಪಾವತಿಸಲು, ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ ಖಾತೆ ಸಂಖ್ಯೆ: 37887098605 ರ ಧನಾದೇಶ ಸಂಖ್ಯೆ:105490, ದಿನಾಂಕ: 20.09.2024 ರಲ್ಲಿ ವಿಪತ್ತು ಪರಿಹಾರ ನಿಧಿ ಖಾತೆ ಸಂಖ್ಯೆ: 54001150679 ಕ್ಕೆ ವರ್ಗಾಯಿಸಿರುವ ರೂ. 10 ಲಕ್ಷಗಳನ್ನು (ಹತ್ತು ಲಕ್ಷಗಳನ್ನು) ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರಿಗೆ ಬಿಡುಗಡೆ ಮಾಡಲು ಹಾಗೂ ಉಳಿದ ರೂ. 5 ಲಕ್ಷಗಳನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಹಿಂದಿರುಗಿಸಲು ಆದೇಶಿಸಿದೆ.

ಸದರಿ ಪರಿಹಾರ ಮೊತ್ತವನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3) ರವರು **CALAMITY RELIEF FUND ಗೆ ಸಂಬಂದಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆಯಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ:54001150679** ರಿಂದ ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರ ಹೆಸರಿನಲ್ಲಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯ ನಿರ್ವಹಣೆಗೆ ತೆರೆಯಲಾಗಿರುವ ಬ್ಯಾಂಕ್ ಖಾತೆ **ಬ್ಯಾಂಕ್ ಹೆಸರು: State Bank of India, ಶಾಖೆಯ ಹೆಸರು: Karwar Branch, ಬ್ಯಾಂಕ್ ಖಾತೆ ಸಂಖ್ಯೆ: 10638097221, ಐಎಫ್‌ಎಸ್‌ಸಿ ಸಂಖ್ಯೆ: SBIN0000857 ಗೆ ರೂ. 10 ಲಕ್ಷಗಳನ್ನು ಹಾಗೂ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ರೂ. 5 ಲಕ್ಷಗಳನ್ನು NEFT** ಮೂಲಕ ವರ್ಗಾಯಿಸುವುದು.

.....5

ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ ರವರು ಪತ್ತೆಯಾಗದ ಇಬ್ಬರು ಜನರ ವಾರಸುದಾರರಿಗೆ ಪರಿಹಾರ ಮೊತ್ತವನ್ನು ನಿಯಮಾನುಸಾರ ಪಾವತಿಸಿ, ಸರ್ಕಾರಕ್ಕೆ ಅನುಸರಣಾ ವರದಿಯನ್ನು / ಉಪಯೋಗಿತಾ ಪ್ರಮಾಣ ಪತ್ರವನ್ನು ನಿಯಮಗಳಂತೆ ಎಲ್ಲಾ ದಾಖಲೆಗಳೊಂದಿಗೆ ಒದಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/10/2024
**(ಮುಕ್ತಾರ್ ಪಾಷ ಹೆಚ್.ಜಿ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A&E) ಹಾಗೂ (E & RSA), ಕರ್ನಾಟಕ, ಪಿ.ಬಿ.ನಂ. 5369, ಪಾರ್ಕ್ ಹೌಸ್ ರೋಡ್, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (G & SSA), ಕರ್ನಾಟಕ, ಪಿ.ಬಿ.ನಂ. 5398, ಪಾರ್ಕ್ ಹೌಸ್ ರೋಡ್, ಬೆಂಗಳೂರು.
3. ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ - 561 301.
4. ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ (ಪರಿಹಾರ ನಿಧಿ), ವಿಧಾನಸೌಧ, ಬೆಂಗಳೂರು.

**ಪ್ರತಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ರವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ (ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುಂದ್ರಾಂಕ) ಕಂದಾಯ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.